ಹೆಚ್ಚಿಸಲಾಗಿದೆ. ಕೊಂಕಣರೈಲ್ವೆ ಮಾರ್ಗ ಪ್ರಾರಂಭವಾದಾಗಿನಿಂದ ಮಳೆಗಾಲದಲ್ಲಿ ಗದ್ದೆಗಳಲ್ಲಿ ನೀರು ತುಂಬಿ ಕೃತಕ ನೆರೆ ಉಂಟಾಗುತ್ತಿದೆ. ಜಿಲ್ಲಾಧಿಕಾರಿಗಳು ಜನಪ್ರತಿನಿಧಿಗಳ ಜೊತೆಗೆ ಹಾಗೂ ರೈಲ್ವೆ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸಿದ್ದು ಶಾಶ್ವತ ಪರಿಹಾರವಾಗಿ ಕುಂದಾಪುರ ತಾಲ್ಲೂಕು ನಾವುಂದ ಗ್ರಾಮದಲ್ಲಿ ಕೆರೆ ಸೇತುವೆ ನಿರ್ಮಾಣದ ಅಗತ್ಯವಿದ್ದು ಈ ಬಗ್ಗೆ ರೈಲ್ವೆ ಇಲಾಖೆಯ ಮುಖ್ಯಸ್ಥರಿಗೆ ದಿನಾಂಕ 17.8.2006ರಲ್ಲಿ ಪತ್ರ ಬರೆಯಲಾಗಿದ್ದು ಅವರ ಉತ್ತರ ಕಾಯಲಾಗುತ್ತಿದೆ.

863. ಶ್ರೀಶಿವರಾಮು ಬಿ. (ಗಂಡಸಿ) :– ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಹಾಸನ ಜಿಲ್ಲೆಗೆ 2005–06, 2006–07 ಮತ್ತು 2007–08 ನೇ ಸಾಲಿನಲ್ಲಿ ಪ್ರಕೃತಿ ವಿಕೋಪದಡಿ ಬಿಡುಗಡೆಯಾಗಿರುವ ಮೊತ್ತವೆಷ್ಟು? ಹಾಗೂ ಅದರಲ್ಲಿ ಖರ್ಚಾಗಿರುವ ಹಣವೆಷ್ಟು? ವರ್ಷವಾರು ಮಾಹಿತಿ ನೀಡುವುದು;

(ಆ) ಬೆಳೆ ಹಾನಿ ಪರಿಹಾರಕ್ಕಾಗಿ ಮತ್ತು ಕಾಮಗಾರಿಗೆ "ಸರ್ಕಾರ ಬಿಡುಗಡೆ ಮಾಡಬೇಕಾಗಿರುವ ಬಾಕಿ ಇರುವ ಮೊತ್ತವೆಷ್ಟು ಹಾಗೂ ಯಾವಾಗ ಬಿಡುಗಡೆ ಮಾಡಲಾಗುವುದು; (ವರ್ಷವಾರು ಮತ್ತು ಬೆಳೆನಷ್ಟ ಮತ್ತು ಕಾಮಗಾರಿಯ ಮೊತ್ತದ ಮಾಹಿತಿ ವಿವರ ಒದಗಿಸುವುದು)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

(ಅ) ಹಾಸನ ಜಿಲ್ಲೆಗೆ ಪ್ರಕೃತಿ ವಿಕೋಪದಡಿ ಸರ್ಕಾರದಿಂದ ಬಿಡುಗಡೆಯಾಗಿರುವ ಹಣದ ವಿವರ

(ಲಕ್ಷಗಳಲ್ಲಿ)

ಸಾಲು	ಬಿಡುಗಡೆ	ಖರ್ಚು
2005–06	2248.55	2248.55
2006–07	1514.06	1212.37
2007–08	200.00	4.77

(ಆ)

ಸಾಲು	ಬೆಳೆ ಪರಿಹಾರ (ರೂ. ಲಕ್ಷಗಳಲ್ಲಿ)	ಬಾಕಿ ಇರುವ ಕಾಮಗಾರಿಗಳು (ರೂ. ಲಕ್ಷಗಳಲ್ಲಿ)
2005–06	1013.82	44.44
2006–07		1729
2007–08		170.00

ಕಾಮಗಾರಿಗಳು: ಜಿಲ್ಲಾಧಿಕಾರಿಗಳ ಬಳಿಯಲ್ಲಿ ಇನ್ನೂ 441.81 ಲಕ್ಷ ಅನುದಾನ ಲಭ್ಯವಿರುತ್ತದೆ. ಈ ಅನುದಾನವನ್ನು ಬಾಕಿ ಇರುವ ಕಾಮಗಾರಿಗಳಿಗೆ ಪಾವತಿಸಲು ಸರ್ಕಾರ ಅನುಮತಿ ನೀಡಿರುತ್ತದೆ.

ಬೆಳೆ ಪರಿಹಾರ 2005–06ನೇ ಸಾಲಿನಲ್ಲಿ ಸಮೀಕ್ಷೆಯಂತೆ ಬೆಳೆ ನಷ್ಟ ರೂ. 1013.82 ಲಕ್ಷ ಇರುತ್ತದೆ. ಇದರ ಬಗ್ಗೆ ಪ್ರಸ್ತಾವನೆ ಬಂದಿರುವುದಿಲ್ಲ.

656. ಶ್ರೀಪಾಟೀಲ್ ಎಂ.ವೈ. (ಅಫ್ಜಲ್ ಪುರ್) ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಮಹಾರಾಷ್ಟ್ರದ ಡ್ಯಾಮಿನಿಂದ ಹೆಚ್ಚಿನ ನೀರು ಬಿಡುವುದರಿಂದ ಅಫಜಲಪುರ ತಾಲ್ಲೂಕಿನ ಹಳ್ಳಿಗಳ ಪದೇ ಪದೇ ಪ್ರವಾಹಕ್ಕೊಳಗಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಪ್ರವಾಹದಲ್ಲಿ ಅಫಜಲಪುರ ತಾಲ್ಲೂಕಿನ ಎಷ್ಟು ಹಳ್ಳಿಗಳು ಪೂರ್ಣ ಜಲಾವೃತಗೊಂಡಿವೆ; ಹಾಗೂ ಭಾಗಶಃ ಎಷ್ಟು ಹಳ್ಳಿಗಳು ಜಲಾವೃತಗೊಂಡಿವೆ;

(ಇ) ಈ ಹಳ್ಳಿಗಳನ್ನು ಶಾಶ್ವತವಾಗಿ ಸ್ಥಳಾಂತರಗೊಳಿಸುವ ತೀರ್ಮಾನವನ್ನು ಸರ್ಕಾರ ಕೈಗೊಂಡಿರುವುದು ನಿಜವೇ;

(ಈ) ಹಾಗಿದ್ದಲ್ಲಿ, ಎಷ್ಟು ಹಳ್ಳಿಗಳನ್ನು ಸ್ಥಳಾಂತರಿಸುವ ಕಾರ್ಯ ಚಾಲನೆಯಲ್ಲಿದೆ;

(ಉ) ಭೀಮಾ ಏತ ನೀರಾವರಿ ಯೋಜನೆಯಲ್ಲಿ ಮುಳುಗಡೆಯಾಗಿರುವ ಹಳ್ಳಿಗಳ ಪುನರ್ ವಸತಿ ಕಾರ್ಯ ಪ್ರಾರಂಭವಾಗಿದೆಯೇ?